ಅಧ್ಯಕ್ಷರು :– ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಮತ್ತೆ ಮತ್ತೆ ಅದನ್ನೇ repeat ಮಾಡಬೇಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ರೈತರು ಅಲ್ಲಿ ಪ್ರತಿನಿತ್ಯ ಧರಣಿ ಮಾಡುತ್ತಿದ್ದಾರೆ.

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) :– ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆಯಲ್ಲಿ ಏಪ್ರಿಲ್‌ನಿಂದ ಜುಲೈತನಕ 4.847 ಟನ್‌ಗಳ ಬೇಡಿಕೆ ಇದೆ. Complex ಗೊಬ್ಬರ 19.615 ಟನ್ ಬೇಡಿಕೆ ಇದೆ. 4.847 ಟನ್‌ಗಳ ಬೇಡಿಕೆಗೆ 4.357 ಟನ್ ಅಲ್ಲಿ ಸರಬರಾಜು ಆಗಿ. ಈಗಾಗಲೇ ಹಂಚಿಕೆಯಾಗಿದೆ. ಅದೇ ರೀತಿಯಲ್ಲಿ Complex ಗೊಬ್ಬರದ 19.615 ಟನ್‌ಗಳ ಬೇಡಿಕೆಗೆ 10.539 ಟನ್ ಸರಬರಾಜಾಗಿದ್ದು. ಈಗಾಗಲೇ ಅದನ್ನೂ ಹಂಚಲಾಗಿದೆ. 27ನೇ ತಾರೀಖು 600 ಮೆಟ್ರಿಕ್ ಟನ್ ಮತ್ತು 28ನೇ ತಾರೀಖಿನಂದು 1850 ಟನ್ ಅಲ್ಲಿಗೆ ಸರಬರಾಜು ಆಗುತ್ತಿದೆ. ಈ ರೀತಿಯಾಗಿ ಸರಬರಾಜು ಆಗಿರುವ ರಸಗೊಬ್ಬರವನ್ನು ಅಲ್ಲಿ ಹಂಚಿಕೆ ಮಾಡಲಾಗುತ್ತಿದೆ. ಬೆಂಗಳೂರು (ಗ್ರಾಮಾಂತರ)ಕ್ಕೆ 27ನೇ ತಾರೀಖು 400 ಮೆಟ್ರಿಕ್ ಟನ್ ಮತ್ತು ರಾಮನಗರಕ್ಕೆ 400 ಮೆಟ್ರಿಕ್ ಟನ್ ಸರಬರಾಜು ಆಗುತ್ತಿದೆ. ನಾಳೆಯಲ್ಲ. ನಾಡಿದ್ದು ಭಾನುವಾರ 27ನೇ ತಾರೀಖು ಇದು ಸರಬರಾಜು ಆಗುತ್ತಿದೆ.

3. ಸಚಿವರ ಹೇಳಿಕೆ.

ವಿಷಯ : ಛತ್ತೀಸ್‌ಘಡ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಸ್ಥಾಪಿಸಲು ಉದ್ದೇಶಿಸಿರುವ ಪಿಟ್ ಹೆಡ್ ಉಷ್ಣ ವಿದ್ಯುತ್ ಸ್ಥಾವರ ಕುರಿತು.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ತೀವ್ರ ಕೊರತೆ ಇದ್ದು ಅದನ್ನು ನಿವಾರಿಸಲು ಸರ್ಕಾರವು ಸಾಧ್ಯವಿರುವ ಎಲ್ಲಾ ರೀತಿಯಿಂದಲೂ ಪ್ರಯತ್ನಿಸುತ್ತಿದೆ. ಅದರ ವಿವರಗಳನ್ನು ನಾನು ಈಗಾಗಲೇ ನಿನ್ನೆ ಸದನದಲ್ಲಿ ಮಂಡಿಸಿದ್ದೇನೆ. ಈ ಎಲ್ಲ ತುರ್ತು ಕ್ರಮಗಳ ಜೊತೆಗೆ ಈ ಸಮಸ್ಯೆಗೆ ಶಾಶ್ವತ ಪರಿಹಾರವೆಂದರೆ ಹೆಚ್ಚು ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ತಯಾರಿಸುವುದು. ಆಗ ಮಾತ್ರ ಇಂತಹ ಕೊರತೆಯ ಸಂದರ್ಭವನ್ನು ಎದುರಿಸಲು ಸಾಧ್ಯ. ಈ ದಿಶೆಯಲ್ಲಿ ಮುಂದಿನ 5 ವರ್ಷಗಳಲ್ಲಿ 5000 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಹೊಸದಾಗಿ ಉತ್ಪಾದಿಸುವ ನಮ್ಮ ಗುರಿಯನ್ನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ.

ಈ ನಿಟ್ಟಿನಲ್ಲಿ ನಾವು ಕೆಲವು ಹೊಸ ವಿದ್ಯುತ್ ಯೋಜನೆಗಳನ್ನು ಹಮ್ಮಿಕೊಂಡಿದ್ದೇವೆ. ಅವುಗಳಲ್ಲಿ ಛತೀಸ್‌ಘಡ ರಾಜ್ಯದಲ್ಲಿ ಕಲ್ಲಿದ್ದಲು ದೊರೆಯುವ

ಸ್ಥಳದಲ್ಲಿಯೇ ಉಷ್ಣ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಿ ವಿದ್ಯುತ್‌ನ್ನು ಪಡೆಯುವುದು ಒಂದಾಗಿದೆ. ಅದಕ್ಕಾಗಿ ಛತ್ತೀಸ್‌ಘಡ ರಾಜ್ಯದೊಂದಿಗೆ ಒಪ್ಪಂದ ಒಂದನ್ನು ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ಆ ರಾಜ್ಯದಲ್ಲಿ ಸಾಕಷ್ಟು ಕಲ್ಲಿದ್ದಲು. ಹೇರಳ ನೀರು ಹಾಗೂ ಹೆಚ್ಚಿನ ಸರ್ಕಾರಿ ಭೂಮಿ ಲಭ್ಯವಿದೆ. ಅವುಗಳನ್ನು ಒದಗಿಸಲು ಛತ್ತೀಸ್‌ಘಡ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಡಾ: ರಮಣಸಿಂಗರು ತಾತ್ವಿಕವಾಗಿ ಒಪ್ಪಿದ್ದಾರೆ. ಅವರೊಂದಿಗೆ ನಮ್ಮ ಮುಖ್ಯಮಂತ್ರಿಗಳು. ನಾನು ಮತ್ತು ನಮ್ಮ ಅಧಿಕಾರಿಗಳು ವಿವರವಾದ ಚರ್ಚೆ ನಡೆಸಿದ್ದೇವೆ. ಆ ರಾಜ್ಯದಲ್ಲಿ ಎರಡು ಹಂತಗಳಲ್ಲಿ ಒಟ್ಟು 2000 ಮೆ.ವ್ಯಾ. ಉಷ್ಣ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಉದ್ದೇಶ ಇಟ್ಟುಕೊಳ್ಳಲಾಗಿದೆ. ಮೊದಲ ಹಂತದಲ್ಲಿ 1000 ಮೆ.ವ್ಯಾ. ವಿದ್ಯುತ್‌ನ್ನು ತಯಾರಿಸಲು ಬೇಕಾದ ಅವಶ್ಯಕತೆಗಳನ್ನು ಛತ್ತೀಸ್‌ಘಡ ರಾಜ್ಯದ ಸಹಕಾರದೊಂದಿಗೆ ಪಡೆದುಕೊಂಡು ಆದಷ್ಟು ತೀವ್ರವಾಗಿ ಕಾರ್ಯ ಪ್ರಾರಂಭಿಸುವ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಅದರಿಂದ ಕರ್ನಾಟಕಕ್ಕೆ ಸ್ಪಾರ್ಧಾತ್ಮಕ ದರದಲ್ಲಿ ಹೆಚ್ಚಿನ ವಿದ್ಯುತ್ ಪೂರೈಕೆ ಮಾಡಲು ಸಹಾಯವಾಗುತ್ತದೆ. ಈ ಬಗ್ಗೆ ವಿವರವಾದ ಒಪ್ಪಂದ ಒಂದನ್ನು ಆಗಸ್ಟ್ ತಿಂಗಳಲ್ಲಿ ಮಾಡಿಕೊಳ್ಳಲಾಗುವುದು. ಪೂರ್ವಭಾವಿಯಾಗಿ ಇದೇ ತಿಂಗಳು ದಿನಾಂಕ 26 ರಂದು ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಹಾಗೂ ಛತ್ತೀಸ್‌ಘಡ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಡಾ: ರಮಣಸಿಂಗರು ಜಂಟಿ ಪತ್ರಿಕಾಗೋಷ್ಟಿ ನಡೆಸಲಿದ್ದಾರೆ. ಈ ವಿಷಯವನ್ನು ಪೂರ್ವಭಾವಿಯಾಗಿ ಸದನಕ್ಕೆ ತಿಳಿಸುತ್ತಿದ್ದೇವೆ. ಒಪ್ಪಂದ ಪೂರ್ಣವಾದ ಬಳಿಕ ವಿವರವನ್ನು ಸದನಕ್ಕೆ ತಿಳಿಸಲಾಗುವುದು.

ಅನುಬಂಧ _ 2

To overcome critical power shortage in the State, the Government is taking action in all possible ways. I have already explained these details yesterday in the House. Along with emergency measures, the permanent solution to this problem is only by way of increasing power generation in the State. In this direction our Hon'ble Chief Minister has already announced that 5000 additional MW capacity will be generated in the State in the next five years.

In this direction, we have planned several new power generation porgrammes. One of them is to establish a pit head thermal power

plant in Chattisgarh State. We are trying to sign a Memorandum of Understanding with that State. Chattisgarh has abundant coal, adequate water and lot of Government land available for power projects. The Hon'ble Chief Minister of Chattisgarh Dr. Raman Singh has in principle agreed to provide all necessary help in this matter. Our Chief Minister, myself and our senior officers have already discussed the details with their coounterparts in Chattisgarh. It is planned to establish a 2000 MW thermal power station in that State in two phases. In the first stage, with the help of Chattisgarh Government, we have planned to generate 1000 MW of thermal power. This will help Karnataka get more power with competitive rate. We will sign a detailed Memorandum of Understanding in the month of August this year. As a preparatory step, our Hon'ble Chief Minister Shri B.S.Yeddyurappa and Hon'ble Chief Minister of Chattisgarh Dr. Raman Singh will address a Joint Press Conference on 26th of this month, on this matter. I am making this statement in advance to inform the Hon'ble House about these developments. After detailed Memorandum of Understanding is signed, it will be made known to the Hon'ble House.

ಶ್ರೀ ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು) ; ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ವಿದ್ಯುತ್ತಿನ ಕೊರತೆ ಇದೆ. ವಿದ್ಯುತ್ ಉತ್ಪಾದನೆ ಮಾಡಬೇಕು. ವಿದ್ಯುತ್ ಉತ್ಪಾದನೆ ಆಗಬೇಕು. ಆದರೆ ಇದು ಹೆಚ್ಚು ಕಡಿಮೆ 5 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಯೋಜನೆಯಾಗಿದೆ. ಈಗಿನ ರೇಟ್‌ನಲ್ಲಿ minimum 25 ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಇದಕ್ಕಾಗಿ ಹೂಡಬೇಕಾಗಿದೆ. ನೂರಾರು ಎಕರೆಗಳ ಜಮೀನನ್ನು ತೆಗೆದುಕೊಂಡು ಹೊರ ರಾಜ್ಯವೊಂದರಲ್ಲಿ ಇದನ್ನು ಹಾಕಲಿಕ್ಕೆ ಹೊರಟಿದ್ದೀರಿ. ಆ ರೀತಿ ಹೊರ ರಾಜ್ಯವೊಂದರಲ್ಲಿ ಹಾಕಲಿಕ್ಕೆ ಹೊರಟಾಗ ಅಲ್ಲಿ land acquisition ಮತ್ತು environment clearance problem ಆಗಬಹುದು. ಮುಂದೆ ಭವಿಷ್ಯದಲ್ಲಿ ಡಾ: ರಮಣಸಿಂಗ್‌ರವರ ಸರ್ಕಾರವೇ ಇರುತ್ತದೆ ಎಂಬುದಿಲ್ಲ. ಸರ್ಕಾರಗಳು ಬದಲಾವಣೆ ಆಗಬಹುದು. ಹೋಗಬಹುದು. ನಾಳೆ ಅಲ್ಲಿ ಮತ್ತೆ ಬೇರೆ ಬೇರೆ ರೀತಿಯಿಂದ ಇದಕ್ಕೆ ಧಕ್ಕೆ ಬಂದರೆ ಕಷ್ಟ ಕೂಡ ಆಗಬಹುದು. ಆದ್ದರಿಂದ ಡೀಪ್

ಆಗಿ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇದೆ. ಎರಡನೆಯದಾಗಿ. ನಮ್ಮಲ್ಲಿ ಇರತಕ್ಕಂಥ. ಈಗಾಗಲೇ ಅರ್ಧಂಬರ್ಧಕ್ಕೆ ನಿಂತು ಹೋಗಿರುವ ಅನೇಕ ಪ್ರಾಜೆಕ್ಟ್‌ಗಳೇನಿವೆ. ಅದನ್ನು complete ಮಾಡುವುದಕ್ಕೆ ನಿಮಗೆ ಹಣ ಬೇಕು. ಅದಕ್ಕೆ ನೀವು ಎಲ್ಲಿಂದ ಹಣವನ್ನು ತರುತ್ತೀರಿ? ಈಗಾಗಲೇ ಬಜೆಟ್‌ನಲ್ಲಿ ಹೋದ ವರ್ಷಕ್ಕಿಂತಲೂ. ಆಚೆ ವರ್ಷಕ್ಕಿಂತಲೂ ಕಡಿಮೆ ಹಣವನ್ನು power allocation ಮಾಡಿದ್ದೀರಿ. ಒಂದು ಕಡೆ ವಿದ್ಯುತ್ ಉತ್ಪಾದನೆಗೆ ಅತ್ಯಂತ ಕಡಿಮೆ ಹಣವನ್ನು ಇಟ್ಟೀದ್ದೀರಿ. ಈ ಸಂದರ್ಭದಲ್ಲಿರುವ inflation ನಿಂದಾಗಿ ನೀಡಿರುವ ಹಣ ಏನೇನೂ ಸಾಲದು. ಇದೇನು ಎಂದು ನನಗೆ ಅರ್ಥವಾಗುತ್ತಿಲ್ಲ. ಮೂರನೆಯದಾಗಿ, ಈಗ ನಮ್ಮಲ್ಲಿ ಇರತಕ್ಕಂಥ ಹೈಡ್ರೋ ಪ್ರಾಜೆಕ್ಟ್ ಇರಬಹುದು. coal based ಇರಬಹುದು ಅಥವಾ ಮಂಗಳೂರಿನಲ್ಲಿ ಇರತಕ್ಕಂಥ ನಾಗಾರ್ಜುನ ಪ್ರಾಜೆಕ್ಟ್ ಇರಬಹುದು. ಬೇರೆ ಬೇರೆ ಕಡೆ ಅನೇಕ ಸಣ್ಣ ಪುಟ್ಟ ಪ್ರಾಜೆಕ್ಟ್‌ಗಳಿವೆ. ಅದನ್ನು complete ಮಾಡಲಿಕ್ಕೆ ನಿಮ್ಮ ಹತ್ತಿರ ಹಣವಿದೆಯೇ? ಅದೆಲ್ಲಾ ಆದ ಮೇಲೆ ಇದನ್ನು ತೆಗೆದುಕೊಳ್ಳಬೇಕು. Sugar factory ಯವರು ಮತ್ತು ಖಾಸಗಿಯವರೂ ಸಹ ಸಾಕಷ್ಟು ವಿದ್ಯುತ್ ಉತ್ಪಾದಿಸುತ್ತಿದ್ದಾರೆ. ಹಾಗೆಯೇ wind energy ಯಿಂದ ಕೂಡ ವಿದ್ಯುತ್ ಉತ್ಪಾದಿಸಲಾಗುತ್ತದೆ. ಅಂತಹ ಅನೇಕ ಜನರು private ನವರಾದ Reliance ಮತ್ತಿತರರಿಗೆ ತಾವು ಉತ್ಪಾದಿಸುವ ವಿದ್ಯುತ್ ಅನ್ನು ಮಾರಾಟ ಮಾಡುತ್ತಿದ್ದಾರೆ. ಅಂತಹವರ ಜೊತೆಗೆ ನೀವು negotiate ಮಾಡಿ. ಮಾತನಾಡಿ. ನೀವೇನು ಉತ್ಪಾದನೆ ಮಾಡುತ್ತಿದ್ದೀರೋ. ಅದನ್ನು ನಮಗೇ ಮಾರಾಟ ಮಾಡಿ ಎಂದರೆ. ಕನಿಷ್ಟ ಪಕ್ಷ ಅದರಿಂದ ಹೆಚ್ಚು ಕಡಿಮೆ 500 ಮೆಗಾವ್ಯಾಟ್‌ನಷ್ಟು ವಿದ್ಯುತ್ ಅನ್ನು ಪಡೆದುಕೊಳ್ಳಬಹುದಾಗಿದೆ. ಇಲ್ಲಿ ಬೇರೆ ಬೇರೆ ರೀತಿಯಿಂದ ವಿದ್ಯುತ್ ಉತ್ಪಾದಿಸುವವರಿಗೆ ನೀವು ಅದನ್ನು ಹೊರಗಡೆ ಮಾರಾಟ ಮಾಡಿಕೊಳ್ಳಿ. ನಾವು ವಿದ್ಯುತ್ ಅನ್ನು ಅಲ್ಲಿಂದ ತರುತ್ತೇವೆ. ಇಲ್ಲಿಂದ ತರುತ್ತೇವೆಂದು ನೀವು ಹೇಳಿಕೊಂಡು ಹೋದರೆ ನಿಜವಾಗಿಯೂ ಅದು ತಾಪತ್ರಯವಾಗುತ್ತದೆ. 25 ಸಾವಿರ ಕೋಟಿ ರೂ.ಗಳ ಬಂಡವಾಳವನ್ನು ಹೂಡಿ. ಏನೋ ನಮ್ಮ ಪಕ್ಷದ ಮುಖ್ಯಮಂತ್ರಿಗಳಿದ್ದಾರೆ. ನಮ್ಮ ಮಾತು ಕೇಳುತ್ತಾರೆ ಎಂಬ ಕಲ್ಪನೆ ಇಟ್ಟುಕೊಂಡು ನೀವು ಈ ಕೆಲಸ ಮಾಡುವುದಾದರೆ. ಅದು ತಪ್ಪಾಗುತ್ತದೆ. ಯಾವ ರಾಜ್ಯದಲ್ಲಾದರೂ ಸರಿಯೇ. ಯಾವ ಪಕ್ಷವೇ ಅಧಿಕಾರದಲ್ಲಿ ಇರಲಿ. ಅವರೆಲ್ಲರೂ ಅವರವರ ರಾಜ್ಯದ ಹಿತವನ್ನು ಕಾಪಾಡುತ್ತಾರೆಯೇ ಹೊರತಾಗಿ ನಿಮ್ಮ ದೃಷ್ಟಿಯಲ್ಲಿರುವಂತೆ, ಅಲ್ಲಿ ನಮ್ಮ ಪಕ್ಷದ ಬಿ.ಜೆ.ಪಿ. ಸರ್ಕಾರವಿದೆ. ನಮ್ಮವರೇ ಆದ ಮಾನ್ಯ ಯಡಿಯೂರಪ್ಪನವರು

ಮುಖ್ಯಮಂತ್ರಿಗಳಾಗಿದ್ದಾರೆ. ಮಾನ್ಯ ಈಶ್ವರಪ್ಪನವರು ಇಂಧನ ಮಂತ್ರಿಗಳಾಗಿದ್ದಾರೆ. ಅದಕ್ಕಾಗಿ ಇದು ಅವರಿಗೆ ನಾವು ಸಹಾಯ ಮಾಡಬೇಕು ಎಂದು ಹೋಗುವುದಿಲ್ಲ. ಅವರೂ ಸಹ ತಮ್ಮ ಸಾಧಕ ಬಾಧಕಗಳನ್ನು ನೋಡಿಕೊಂಡು tariff rise ಮಾಡಿದರೂ ಮಾಡಬಹುದು. ಇಲ್ಲವೇ ಅಲ್ಲಿ ಜಮೀನಿನ ತೊಂದರೆಯಾದರೂ ಬರಬಹುದು. ಇಲ್ಲವೇ ಅಲ್ಲಿ ಈ ಬಗ್ಗೆ ಚಳವಳಿಗಳಾದರೂ ಆಗಬಹುದು. ಈ ರೀತಿ ಅನೇಕ ರೀತಿಯ ತೊಂದರೆಗಳಾಗುವ ಸಾಧ್ಯತೆ ಇರುತ್ತದೆ. 25 ಸಾವಿರ ಕೋಟಿ ರೂಪಾಯಿಗಳ commitment ಅನ್ನು ನೀವು ಒಂದೇ ಕಾಲಕ್ಕೆ ಮಾಡುವುದಕ್ಕಿಂತಲೂ ನಮ್ಮಲ್ಲಿ ಈಗಾಗಲೇ committed ಆಗಿರತಕ್ಕಂಥ project ಗಳನ್ನು complete ಮಾಡಬೇಕು. Sugar factory ಮತ್ತು Hydro project ನಿಂದ ವಿದ್ಯುತ್ ಉತ್ಪಾದಿಸತಕ್ಕವರಿಗೆ encourage ಮಾಡಿ. ಅವರಿಂದಲೂ ವಿದ್ಯುತ್ ಅನ್ನು ಪಡೆದುಕೊಂಡು. ಅದು ಮುಗಿದ ನಂತರ ಮುಂದಿನ ವಿಚಾರ ಮಾಡತಕ್ಕದ್ದು ಸೂಕ್ತವೆಂದು ನಾನು ಭಾವಿಸುತ್ತೇನೆ. ಅದು ತೆಗೆದುಕೊಂಡು ಅದು ಮುಗಿದ ನಂತರ ಮುಂದಿನ ವಿಚಾರ ಮಾಡತಕ್ಕಂಥದ್ದು ಸರಿ ಎಂಬುದು ನನ್ನ ಭಾವನೆ, ಇಲ್ಲವೆಂದರೆ. ಇದೊಂದು ದೊಡ್ಡ ಹಗರಣವಾಗಬಾರದು ಅಥವಾ ನಾವು ಹೋಗಿ ಕೈಕಟ್ಟಿ ಕುಳಿತುಕೊಂಡು ಆಮೇಲೆ ಬಿಡಿಸಿಕೊಳ್ಳುವ ಪ್ರಯತ್ನ ಮಾಡಿದರೆ. ಖಂಡಿತವಾಗಿ ಮುಂದಿನ generation ನಮ್ಮನ್ನು ಕ್ಷಮಿಸಲಾರರು. ಏಕೆಂದರೆ, transmission loss ಇರುತ್ತದೆ. ಅದಕ್ಕೆ ಇದರ merit, de-merit, deep ಆಗಿ ಯೋಚಿಸಿ. ಆಮೇಲೆ ಹೆಜ್ಜೆಯನ್ನಿಡುವುದು ಉತ್ತಮವೆಂದು ಹೇಳುತ್ತೇನೆ. ಇದು ನನ್ನ ಸಲಹೆ.

ಶ್ರೀ ಹೆಚ್.ಡಿ. ರೇವಣ್ಣ ; ಮಾನ್ಯ ಇಂಧನ ಸಚಿವರು ಮೊನ್ನೆ ಒಂದು ಹೇಳಿಕೆ ಕೊಟ್ಟಿದ್ದೀರಿ. ಇವತ್ತೂ ಒಂದು ಹೇಳಿಕೆಯನ್ನು ಸದನದಲ್ಲಿ ಕೊಟ್ಟಿದ್ದಾರೆ. ಇದರಲ್ಲಿ. ಮುಂದಿನ 5 ವರ್ಷಗಳಲ್ಲಿ 5.000 ಮೆ.ವ್ಯಾ. ವಿದ್ಯುತ್ ಅನ್ನು ನಾವು ಹೊಸದಾಗಿ ಉತ್ಪಾದಿಸುವ ಗುರಿಯನ್ನು ಘೋಷಣೆ ಮಾಡುವುದನ್ನು ಹೇಳಿದ್ದಾರೆ. ಅದರ ಜೊತೆಗೆ. ನಮ್ಮ ಅಧಿಕಾರಿಗಳ ಜೊತೆ ವಿವರವಾದ ಚರ್ಚೆ ನಡೆಸಿದ್ದೇವೆ. ಛತ್ತೀಸ್‌ಘಡದಲ್ಲಿ 2000 ಮೆ.ವ್ಯಾ. ವಿದ್ಯುತ್ ಅನ್ನು ಉತ್ಪಾದನೆ ಮಾಡುವುದು. ಈಗ ಮೊದಲನೇ ಹಂತದಲ್ಲಿ 1000 ಮೆ.ವ್ಯಾ. ವಿದ್ಯುತ್ ಅನ್ನು ತಯಾರು ಮಾಡಬೇಕೆಂದು ಹೇಳಿದರು. ಏಕೆಂದರೆ. ಈ ಹೇಳಿಕೆ ನೋಡಿದರೆ ನನಗಿರುವ ಮಾಹಿತಿ ಪ್ರಕಾರ. ಕೆಪಿಸಿಎಲ್ ನಲ್ಲಿ ಏನೇನು ಮಾಡುತ್ತಿದ್ದಾರೆನ್ನುವುದನ್ನು ಈ ರಾಜ್ಯದ ಜನರಿಗೆ ಗೊತ್ತಾಗದ ಹಾಗೆ ಮುಚ್ಚಿಟ್ಟಿದ್ದಾರೆಂದು ಹೇಳಬೇಕಾಗುತ್ತದೆ. ಕಳೆದ 3 ವರ್ಷಗಳಲ್ಲಿ ಕೆಪಿಸಿಎಲ್ ನಲ್ಲಿ ಏನೇನು ನಡೆದಿದೆ ಎನ್ನುವುದನ್ನು ರಾಜ್ಯದ

ಜನತೆಗೆ ಹೇಳುವುದರಲ್ಲಿ ಮುಚ್ಚಿಟ್ಟಿದ್ದಾರೆಂದು ಹೇಳಬೇಕಾಗುತ್ತದೆ. ಆ ಉದ್ದೇಶದಿಂದ ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಟ್ಟರೆ ನಾನು ಎಳೆ ಎಳೆಯಾಗಿ ಬಿಡಿಸಿ ಹೇಳುತ್ತೇನೆ. next genaration ಗೆ ಏನೇನು ಮಾಡಿದ್ದೇವೆ. ಕಳೆದ 3 ವರ್ಷಗಳಲ್ಲಿ ಕೆಪಿಸಿಎಲ್ ನಲ್ಲಿ ಧರ್ಮಸಿಂಗ್‌ರವರ ಕಾಲದಲ್ಲಿ ಕುಮಾರಸ್ವಾಮಿಯವರ ಕಾಲದಲ್ಲಿ. ಮುಂದಿನ 25 ವರ್ಷಗಳಿಗೆ ಏನೇನಾಗಬೇಕೆಂಬ ಬಗ್ಗೆ ಚಿಂತನೆ ಮಾಡಿದ್ದೇವೆ. ಆ ವಿಷಯವನ್ನು ಎಳೆಎಳೆಯಾಗಿ ಬಿಡಿಸಿ ಹೇಳುವುದಕ್ಕೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಈ ಎರಡು ಹೇಳಿಕೆಗಳನ್ನು ಇಡಿ. ಇಲ್ಲದಿದ್ದರೆ. ಈಗಲೇ ಪ್ರಾರಂಭ ಮಾಡಿ ಎಂದು ಹೇಳಿದರೆ ಮಾತನಾಡುವುದಕ್ಕೆ ರೆಡಿ ಇದ್ದೇನೆ. ಏಕೆಂದರೆ. ರಾಜ್ಯದ ಜನತೆಗೆ ಹಿಂದಿನ ಸರ್ಕಾರ ಮಲಗಿತ್ತು. ಈಗ ನಾವೇನೋ ಎದ್ದು ಕುಳಿತಿದ್ದೇವೆನ್ನುವ ಭಾವನೆ ಬರಬಾರದು. ನಾಳೆ 5000 ಮೆ.ವ್ಯಾ. ಪಾರ್ಸ್‌ಲ್‌ನಲ್ಲಿ ಬರುತ್ತದೆ. 2003–3000 ಮೆ.ವ್ಯಾ. ಛತ್ತೀಸ್‌ಘಡದಿಂದ ಪಾರ್ಸ್‌ಲ್ ಬರುತ್ತಿದೆ ಎನ್ನಲಾಗುತ್ತಿದೆ. ಅದಕ್ಕೊಸ್ಕರ ಹೇಳಿಕೆಯ ಬದಲಾಗಿ ಚರ್ಚೆಗೆ ಇಡಿ ಎಂದು ನಾನು ಹೇಳುವುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಹಾಗೆ ನಿಮ್ಮ ಬಗ್ಗೆ ಯಾರೂ ಹೇಳುವುದಕ್ಕೆ ಹೋಗುವುದಿಲ್ಲ. ಯಾರು ಮಲಗಿದರೂ ನೀವು ಮಲಗುವುದಿಲ್ಲ. ಏನೇನು ಮಾಡಬೇಕೋ ಮಾಡಿಕೊಳ್ಳುತ್ತಾ ಇರುತ್ತೀರಿ.

ಶ್ರೀ ಹೆಚ್.ಡಿ. ರೇವಣ್ಣ ; ನಮ್ಮ ಕೈಗಾರಿಕೆ ಸಚಿವರಿಗೆ ಹೇಳುವುದಾದರೆ. ನಮ್ಮ ಅಬಕಾರಿ ಸಚಿವರು 40 ತಿಂಗಳು ನಾವೇ ಇದ್ದೆವು ಎಂದು ಹೇಳಿದರು. ಅದಕ್ಕೆ ಹೇಳುತ್ತೇನೆ. 40 ತಿಂಗಳು ನಾನು ಇದ್ದ ಅವಧಿಯಲ್ಲಿ. ನನ್ನ ಅನುಭವದಲ್ಲಿ. ಈ ಎರಡು ಹೇಳಿಕೆಗಳಿವೆಯಲ್ಲ. ಈ ರಾಜ್ಯದ ಜನತೆಗೆ ಸರ್ಕಾರ ತಪ್ಪು ಮಾಹಿತಿ ಕೊಡುತ್ತಿದೆ ಎಂದು ಹೇಳುತ್ತೇನೆ. ಅದಕ್ಕೆ ಇದರ ಬಗ್ಗೆ ಚರ್ಚಿಸುವುದಕ್ಕೆ ನನಗೆ ಅರ್ಧ ಗಂಟೆ ಅವಕಾಶ ಕೊಡಿ. ಈ ಸದನದ ಸದಸ್ಯರಿಗೂ ಅವಕಾಶ ಕೊಡಿ. ಈ ರಾಜ್ಯದ ಜನರ ಹಿತದೃಷ್ಟಿಯಿಂದ ಸದನವನ್ನು ತಪ್ಪು ದಾರಿಗೆಳೆಯಬೇಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಮ್ಮ ಹಿರಿಯ ಶಾಸಕರಾದ ರೇವಣ್ಣನವರು ಹೇಳಿದಕ್ಕೆ ನಾನು ಅನುಮೋದಿಸುತ್ತೇನೆ. ಏಕೆಂದರೆ. ಅವರು ಕಳೆದ 3 ವರ್ಷಗಳಲ್ಲಿ ಏನೇನಾಗಿದೆ. ಇದರ ಬಗ್ಗೆ ಎಳೆಎಳೆಯಾಗಿ ಬಿಡಿಸಿ ಹೇಳುತ್ತೇನೆಂದರು. ನಾನೂ ಈ ಖಾತೆಗೆ ಹೊಸಬನಾಗಿದ್ದೇನೆ. ಅದನ್ನು ರಿಪೇರಿ ಮಾಡುವುದಕ್ಕೋಸ್ಕರ ನೀವು

ಎಳೆಎಳೆಯಾಗಿ ಬಿಡಿಸಿಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. ಏಕೆಂದರೆ. 3 ವರ್ಷಗಳಲ್ಲಿ ಎಂದರೆ ಅದರಲ್ಲಿ 20 ತಿಂಗಳು ನೀವೇ ಇಂಧನ ಸಚಿವರಾಗಿದ್ದವರು. ಅದರ ಹಿಂದೆ ಯಾರ್ಯಾರು ಇದ್ದರು ನನಗೆ ಗೊತ್ತಿಲ್ಲ. ಗೊತ್ತಿದ್ದರೆ ತಾವು ಹೇಳಿ. ಹಾಗಾಗಿ, ದಯವಿಟ್ಟು ನಾನು ನಿಮಗೆ ಮನವಿ ಮಾಡುತ್ತೇನೆ. ಕರ್ನಾಟಕ ರಾಜ್ಯದ ಜನರ ಹಿತದೃಷ್ಟಿಯಿಂದ ಇದನ್ನು ಎಳೆಎಳೆಯಾಗಿ ಬಿಡಿಸಿ ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಅವರೇನು ಹೇಳಿದ್ದಾರೆ. ಅದನ್ನು ನಾನು ಅನುಮೋದನೆ ಮಾಡುತ್ತೇನೆ.

ಅಧ್ಯಕ್ಷರು ; ನಾನು ಅದಕ್ಕೆ ಸೋಮವಾರ. ಮಂಗಳವಾರ ಸಮಯ ಕೊಡುತ್ತೇನೆ. ಸೋಮವಾರ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಕಳೆದ 3 ವರ್ಷಗಳಿಂದ ಇದ್ದ ಅಧಿಕಾರಿಗಳೆಲ್ಲ ಅವರ ಜೊತೆಯಲ್ಲೀಗ ಇದ್ದಾರೆ. ನನ್ನ ಜೊತೆ ಅಧಿಕಾರಿಗಳಿಲ್ಲ. ಅವರು ಎಲ್ಲ ಮಾಹಿತಿ ತೆಗೆದುಕೊಂಡು ಬರಲಿ.

ಅಧ್ಯಕ್ಷರು : ಆಯಿತು. ನಿಮಗೆಲ್ಲ ಮಾಹಿತಿ ಇದೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರಿಗೆ clarification ಕೊಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ. ಇದು 25.000 ಕೋ.ರೂ.ಗಳ ಯೋಜನೆಯಲ್ಲ. ನಾವು ಮೊದಲನೇ ಹಂತದಲ್ಲಿ 1000 ಮೆ.ವ್ಯಾ. ವಿದ್ಯುತ್ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. 1000 ಮೆ.ವ್ಯಾ. ವಿದ್ಯುತ್‌ಗೆ ಬೇಕಾದದ್ದು 5000 ಕೋಟಿ ರೂಪಾಯಿಗಳು. 5000 ಕೋಟಿ ರೂಪಾಯಿಗಳಲ್ಲಿ 4000 ಕೋಟಿ ರೂಪಾಯಿಗಳು ಸಾಲ ತರುವುದಕ್ಕೆ ಅವಕಾಶವಾಗುತ್ತದೆ. 1000 ಕೋಟಿ ರೂಪಾಯಿಗಳು equity ಯನ್ನು ಬೇಕಾದರೆ ನಾವು ಮಾಡಿಕೊಳ್ಳಬೇಕಾಗುತ್ತದೆ. ಎರಡನೆಯದಾಗಿ. ಎರಡನೆಯ ಅಂಶವನ್ನೇನು ಪ್ರಸ್ತಾಪಿಸಿದ್ದಾರೆ. wind energy. bio-mass and co-generation ಈ ಎಲ್ಲದರ ಪ್ರಕಾರ. ನಾನು ವಿದ್ಯುತ್ ಸಚಿವನಾದ ನಂತರ. ಸಂಬಂಧಪಟ್ಟವರು ಯಾರ್ಯಾರು ಉತ್ಪಾದನೆ ಮಾಡುತ್ತಾರೆ. ಅವರೆಲ್ಲರನ್ನೂ ಕರೆದು ಈಗಾಗಲೇ ಮಾತನಾಡಿದ್ದೇನೆ. ಈಗಾಗಲೇ ಅದರಲ್ಲಿ 9000 ಮೆ.ವ್ಯಾ. wind energy ಗೆ ಇವರು permission ಕೊಟ್ಟಿದ್ದಾರೆ. ಇಲ್ಲಿಯವರೆಗೆ permission ಕೊಟ್ಟಿರುವುದು 9000 ಮೆ.ವ್ಯಾ. ಉತ್ಪಾದನೆಯಾಗುತ್ತಿರುವುದು ಕೇವಲ 900 ಮೆ.ವ್ಯಾ. ಕರ್ನಾಟಕ ರಾಜ್ಯಕ್ಕೆ ಆಗುತ್ತಿರುವ

ದೊಡ್ಡ ಅನ್ಯಾಯವಿದು. ಇದನ್ನು ರಿಪೇರಿ ಮಾಡುವುದಕ್ಕೇನು ಮಾಡಬೇಕೆನ್ನುವ ಬಗ್ಗೆ ಖಂಡಿತವಾಗಿ ಮುಂದಿನ ದಿನಗಳಲ್ಲಿ ನಾವು ಯೋಜನೆ ಮಾಡುತ್ತೇವೆ. ಜೊತೆಗೆ. ಮೊನ್ನೆ ನಡೆದ ಸರ್ವ ಪಕ್ಷಗಳ ಸಭೆಯಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿ ಆ ಮನೆಯ ವಿರೋಧ ಪಕ್ಷದ ನಾಯಕರು. ನಾಣಯ್ಯನವರು. ಪ್ರಮುಖರು ತಿಳಿಸಿದ್ದೇನೆಂದರೆ ಇದು ಅಂತಿಮ ರೂಪ ಪಡೆದುಕೊಳ್ಳುವ ಮುಂಚೆ ಸದನದ ಎಲ್ಲ ವಿರೋಧ ಪಕ್ಷಗಳ ನಾಯಕರ ಸಭೆ ಕರೆದು ಚರ್ಚಿಸಿ. ಅದಾದ ನಂತರ, ಅಂತಿಮ ನಿರ್ಣಯವನ್ನು ಛತ್ತೀಸ್‌ಘಡ ಸರ್ಕಾರದಲ್ಲಿಯೂ ಚರ್ಚೆಯಾಗಬೇಕಾಗುತ್ತದೆ. ಈಗಾಗಲೇ ಮಾನ್ಯ ಹಿರಿಯರಾದ ಮಲ್ಲಿಕಾರ್ಜುನ ಖರ್ಗೆಯವರು ತಿಳಿಸಿದ ಪ್ರಕಾರ ಕೇಂದ್ರ ಸರ್ಕಾರದಲ್ಲೂ ಇದರ ಬಗ್ಗೆ ಚರ್ಚೆಯಾಗಿ ಅವರೂ permission ಕೊಡಬೇಕಾಗುತ್ತದೆ. ಜೊತೆಗೆ. ಅವರು ಪ್ರಸ್ತಾಪಿಸಿದಂತೆ. Land Environment clearance ಇವೆಲ್ಲ ಆದ ಮೇಲೆಯೇ ನಾವು ಮಾಡಬೇಕಾಗುತ್ತದೆ. ಹೀಗಾಗಿ. ನಾಳೆ ಮಾಡುತ್ತಿರುವುದೇನೆಂದರೆ, ಛತ್ತೀಸ್‌ಗಡದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ರಮಣಸಿಂಗ್‌ರವರು ಇಲ್ಲಿ ಬಂದಾಗ ನಾನು. ನಮ್ಮ ನಾಯಕರಾದ, ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು. ನಮ್ಮ ಅಧಿಕಾರಿಗಳು, ಆ ರಾಜ್ಯದ ಅಧಿಕಾರಿಗಳ ಜೊತೆಗೆ. ಮುಖ್ಯಮಂತ್ರಿಯವರ ಜೊತೆಗೆ ಒಂದು ಪ್ರಸ್ತಾಪವನ್ನು ಮಾತ್ರ ಚರ್ಚೆ ಮಾಡಿದ್ದೇವೆ. ಅವರು ಕರ್ನಾಟಕ ರಾಜ್ಯ ಎದುರಿಸುತ್ತಿರುವ ವಿದ್ಯುತ್ ಸಮಸ್ಯೆಯನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ತುರ್ತಾಗಿ ನಮಗೆ 100.200 ಮೆ.ವ್ಯಾ. ವಿದ್ಯುತ್ ಕೊಡುವ ದಿಕ್ಕಿನಲ್ಲಿ ಕೂಡ ಯೋಚನೆ ಮಾಡುತ್ತಿರುವುದನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಸುಮಾರು 1000 ಮೆ.ವ್ಯಾ. ನಷ್ಟು ಅಲ್ಲಿ ಹಾಕಲಿಕ್ಕೆ ತಾತ್ವಿಕ ಒಪ್ಪಿಗೆ ಕೊಟ್ಟಿದ್ದಾರೆ. ಹೀಗಾಗಿ. ಅಲ್ಲಿಯ ಮತ್ತು ನಮ್ಮ ಸರ್ಕಾರಗಳು. ನಾವು ಅಂತಿಮ ತೀರ್ಮಾನ ಮಾಡುವ ಮುಂಚೆ ನಾನು ತುಂಬಾ ಸ್ಪಷ್ಟವಾಗಿ ಹೇಳುತ್ತೇನೆ. ಎಲ್ಲ ವಿರೋಧ ಪಕ್ಷಗಳ ನಾಯಕರ ಜೊತೆ ಕುಳಿತು ಚರ್ಚಿಸಿ. ಆ ನಂತರವೇ ನಾವು ಅಂತಿಮವಾದ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು : ಜಯಚಂದ್ರರವರೆ, ಸಾಕು, ಮುಂದಿನ ವಿಷಯ ತೆಗೆದುಕೊಳ್ಳೋಣ.

ಶ್ರೀ ಟಿ.ಬಿ. ಜಯಚಂದ್ರ : ಹೂಡಿಕೆ ಮಾಡುವ ಮುಖೇನ ಸದನದ ಒಪ್ಪಿಗೆ ಎನ್ನುವ ಭಾವನೆ ಬೇಡ.

(ಗೊಂದಲ)

ಅಧ್ಯಕ್ಷರು : ಅವರು ಒಪ್ಪಿಗೆ ಎಂದು ಎಲ್ಲಿ ಕೇಳಿದರು ?

ಶ್ರೀ ಟಿ.ಬಿ. ಜಯಚಂದ್ರ : ಸಭೆಯ ಗಮನಕ್ಕೆ ತಂದಿದ್ದೀರಿ. ಆದರೆ. ನೀವು ಕರ್ನಾಟಕದಲ್ಲಿರುವ ಎಲ್ಲಾ on going project ಏನಿದೆ. ಈಗ 9000 ಮೆ.ವ್ಯಾ. ವರೆಗೂ clearance ಕೊಟ್ಟಿದ್ದೇವೆಂದು ಹೇಳಿದಿರಲ್ಲ. ಕೊಟ್ಟರೆ ಇದುವರೆಗೆ ಏಕೆ ಪ್ರಾರಂಭಿಸಿಲ್ಲ? cancel ಮಾಡುವ ಪ್ರಶ್ನೆ ಬೇರೆ. ಹಣವನ್ನು ತೊಡಗಿಸಬೇಕಾದ ಸಂದರ್ಭದಲ್ಲಿ ನೇರವಾಗಿ ಸರ್ಕಾರ ಹಣವನ್ನು ತೊಡಗಿಸಬಾರದು. ಇವತ್ತು ನೀವು joint venture ನಲ್ಲೇ ಮಾಡುವುದಕ್ಕೆ ಬರುತ್ತದೆ. ನೀವು joint venture ಮಾಡುವುದಕ್ಕೆ..... (ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಾನು statemen ಕೊಟ್ಟಿದ್ದೇನೆ. ನೀವು clarification ಕೇಳಿ. ಪೂರ್ಣ ಚರ್ಚೆಯನ್ನು ಆಮೇಲೆ ಮಾಡಲಿ. ಚರ್ಚೆಯನ್ನು ಈಗಲೇ ಶುರು ಮಾಡಿದರೆ.

.... (ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಸಭೆಗೆ ಈಗಲೇ ಹೇಳಬಹುದಾಗಿತ್ತಲ್ಲ?

ಶ್ರೀ ಕೆ.ಎಸ್. ಈಶ್ವರಪ್ಪ : ಏನೆಂದು?

ಶ್ರೀ ಟಿ.ಬಿ. ಜಯಚಂದ್ರ : ನಿಮ್ಮ total installed capacity. ನಾವೆಷ್ಟಕ್ಕೆ permission ಕೊಡುತ್ತಿದ್ದೇವೆ. (ಗೊಂದಲ)

ಅಧ್ಯಕ್ಷರು ; ಜಯಚಂದ್ರರವರೆ. ಇದರ ಬಗ್ಗೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದೆನಲ್ಲ. ಆಗ ಅವಕಾಶ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಕೊನೆಯದಾಗಿ ಹೇಳುತ್ತೇನೆ. ದಯಮಾಡಿ ಒಂದು project report ಮಾಡಿಸಿ.

ಅಧ್ಯಕ್ಷರು ; ಅದನ್ನೆಲ್ಲ ಮಾಡಲೇಬೇಕು. (ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ ; project report ಇಲ್ಲದೇ project ಆಗುತ್ತದೆಯೇ?(ಗೊಂದಲ) ಎಲ್ಲ ಮಾಡುತ್ತೇವೆ. (ಗೊಂದಲ) ತಾತ್ವಿಕ ಒಪ್ಪಿಗೆ (ಗೊಂದಲ) ನಾಳೆ ಚರ್ಚೆ ಮಾಡುತ್ತಿದ್ದೇವೆ. (ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : It is not a commitment. The House has not agreed for this.

ಶ್ರೀ ಕೆ.ಎಸ್. ಈಶ್ವರಪ್ಪ ; ಮಾನ್ಯ ಅಧ್ಯಕ್ಷರೆ. ಅವರು ಒಪ್ಪುತ್ತಾರೋ. ಬಿಡುತ್ತಾರೋ ಅದು ನನಗೆ ಸಂಬಂಧವಿಲ್ಲ. ನಾವು ಹೇಳುತ್ತಿರುವುದು. ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ವಿದ್ಯುತ್ ಸಮಸ್ಯೆ ಇರುವುದಕ್ಕೋಸ್ಕರ 1000 ಮೆ.ವ್ಯಾ.ನಷ್ಟು ವಿದ್ಯುತ್‌ಗಾಗಿ ನಾವು ಭತ್ತೀಸ್‌ಘಡದಲ್ಲಿ ಪ್ರಾರಂಭ ಮಾಡುತ್ತಿದ್ದೇವೆಂದು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಅದರ ಬಗ್ಗೆ ನೀವೇನು ಸಲಹೆಗಳನ್ನು ಕೊಡುತ್ತೀರೋ. ಆ ಸಲಹೆಗಳನ್ನು ತೆಗೆದುಕೊಂಡು ನಾವು ಅಂತಿಮವಾದ decision ತೆಗೆದುಕೊಳ್ಳುತ್ತೇವೆ. ನಿಮ್ಮ ಒಪ್ಪಿಗೆ ಇಲ್ಲವೆಂದರೂ ನಾವು ಮಾಡುವವರೇ. ನಿಮ್ಮ ಒಪ್ಪಿಗೆ ಕೇಳುವ ಅವಶ್ಯಕತೆ ಇಲ್ಲ. ಕರ್ನಾಟಕ ರಾಜ್ಯದ ಜನರ ಹಿತದೃಷ್ಟಿಯಿಂದ ನಾವು ಮಾಡುತ್ತಿದ್ದೇವೆ. ದಯವಿಟ್ಟು ನೀವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಉದ್ದಟತನದ ಮಾತು. ಈ ಸದನ ಒಪ್ಪಿಗೆ ಕೊಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಒಪ್ಪಿಗೆ ಕೊಡುತ್ತದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : you cannot say like that.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಟಯಚಂದ್ರರವರದ್ದು ಹೇಳಿದ್ದು. (ಗೊಂದಲ) ನಾನು ಸದನದ್ದು ಹೇಳಿದ್ದು. ವೈಯಕ್ತಿಕವಾಗಿ ಅಲ್ಲ. (ಗೊಂದಲ) ಕೊಡುವುದಿಲ್ಲವೆಂದರೆ ಏನು ಕೊಡುವುದಿಲ್ಲ? (ಗೊಂದಲ) ಎಂದರೆ ಅರ್ಥವೇನಿದೆ? (ಗೊಂದಲ) ನಾವು ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ. ನಿಮ್ಮ ಅಭಿಪ್ರಾಯ ಕೇಳುತ್ತೇವೆಂದು ಹತ್ತತ್ತು ಸಾರಿ ಹೇಳಿದ್ದೇವೆ. ನಿಮ್ಮ ಅಭಿಪ್ರಾಯ ಕೇಳಿಯೇ ನಾವು ತೆಗೆದುಕೊಳ್ಳುತ್ತೇವೆ. ನೀವು ಒಪ್ಪಿಗೆ ಕೊಡಲಿಲ್ಲವೆಂದರೆ. ಬಿಡಿ (ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ; ಏನಿದು?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ ; ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಅಭಾವ ಪರಿಹರಿಸುವ ಆಸಕ್ತಿ ನಿಮಗಿದೆಯೋ ಇಲ್ಲವೋ?

ಅಧ್ಯಕ್ಷರು ; ಖರ್ಗೆಯವರೆ. ಚರ್ಚೆ ಮಾಡುತ್ತೇವೆಂದಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಎಲ್ಲರ ಅಭಿಪ್ರಾಯ ಕೇಳಿ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇನೆ. ನಿಮ್ಮ ಅಭಿಪ್ರಾಯವಿಲ್ಲದೆ ನಾವು ಹೋಗುವುದಿಲ್ಲವೆಂದು ಹೇಳಿದರೂ ಕೂಡ ನನ್ನ ಒಪ್ಪಿಗೆ ಇಲ್ಲವೆಂದು ಹೇಳಿದರೆ ನಾನೇನು ಹೇಳಲಿ?

(ಗೊಂದಲ)

ಅಧ್ಯಕ್ಷರು : ಅವರು clear ಆಗಿ ಹೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಅವರು project report ಮಾಡಿಸಲಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : project report ಇಲ್ಲದೇ project ಆಗುತ್ತದೆಯೇ?

(ಗೊಂದಲ)

ಅಧ್ಯಕ್ಷರು ; ಆಯಿತು. project report ಮಾಡಿಯೇ ಮಾಡಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮುಖ್ಯಮಂತ್ರಿಯವರ ಜೊತೆ ಮಾತನಾಡಿ...

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ತಾತ್ವಿಕ ಒಪ್ಪಿಗೆ ನಡೆದಿದೆ ಎಂದು ಹೇಳುತ್ತಿದ್ದೇವೆ. (ಗೊಂದಲ) ಎಲ್ಲರ ಅಭಿಪ್ರಾಯ ತೆಗೆದುಕೊಂಡು ಮಾಡುತ್ತೇವೆಂದು ಹೇಳಿದರೂ ಅದಕ್ಕೆ ಅಡ್ಡ ಬಂದರೆ ಹೇಗೆ? (ಗೊಂದಲ) ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಪರಿಹಾರ ಮಾಡಲು ಸರ್ಕಾರ ಪ್ರಯತ್ನ ಮಾಡುತ್ತದೆ. (ಗೊಂದಲ)

ಅಧ್ಯಕ್ಷರು : ನಿಮ್ಮ ಸಲಹೆ ಕೊಡಿ.

ಶ್ರೀ ಟಿ.ಬಿ. ಜಯಚಂದ್ರ : 1.000 equity ಮತ್ತು 4.000 ಕೋಟಿ ಸಾಲ ತರುತ್ತೇವೆಂದರೆ. ಹೇಗೆ? Without Project Report ನೀವು ಹೇಗೆ ಮಾತನಾಡುತ್ತೀರಿ?

ಶ್ರೀ ಕೆ.ಎಸ್. ಈಶ್ವರಪ್ಪ ; Project Report ಇಡುತ್ತೇವೆ. ಚರ್ಚೆ ಮಾಡುತ್ತೇವೆಂದು ಹೇಳಿದೆವಲ್ಲ. ಇನ್ನು ನಾನು ಈಗ ಯಾವ ರೀತಿಯಲ್ಲಿ ಉತ್ತರ ಕೊಡಲಿ?

ಅಧ್ಯಕ್ಷರು : ಆಯಿತು. ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ : ಮಂತ್ರಿಗಳೇ ಹೀಗೆ ಹೇಳಿಬಿಟ್ಟರೆ. detailed project report ಬೇಕಾಗಿಲ್ಲ. ಅಗ್ರಿಮೆಂಟ್ ಮಾಡಿಕೊಳ್ಳುತ್ತೇವೆಂದರೆ. ಏನಿದು?

ಶ್ರೀ ಕೆ.ಎಸ್. ಈಶ್ವರಪ್ಪ ; ಹೊರಗಡೆ ಸ್ಟೇಟ್‌ಮೆಂಟ್ ಮಾಡಿದರೆ ಆಯಿತೇ. ನಾವು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಯಮಾಡಿ ಈ ಮನೆಯ ಯಾವುದೇ ಹಿರಿಯ ಸದಸ್ಯರು ತಪ್ಪು ಗ್ರಹಿಕೆ ಮಾಡಿಕೊಳ್ಳುವ ಅಗತ್ಯವಿಲ್ಲ. ಈ ಮನೆಯಲ್ಲಿ ಚರ್ಚೆಯಾಗಬೇಕು. ನಿಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೇ ನಾವು ಮುಂದೆ ಹೋಗಬೇಕಾಗಿದೆ. ಆ ಹಿನ್ನೆಲೆಯಲ್ಲಿ ಪ್ರತಿ ಪಕ್ಷದ ಎಲ್ಲಾ ನಾಯಕರುಗಳ ಒಂದು ಸಭೆ ಕರೆದಿದ್ದೆ. ಅವತ್ತು ಚರ್ಚೆಯಾಗಲಿಲ್ಲ. ಅವರು ಇಲ್ಲಿಯೇ ಜಿಂದಾಲ್‌ನಲ್ಲಿ ಇದ್ದುದರಿಂದ ನಮಗೆ ತುರ್ತಾಗಿ 200. 300 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಬೇಕಾಗಿದ್ದುದರಿಂದ ನಾವು ರಿಕ್ವೆಸ್ಟ್ ಮಾಡಿಕೊಂಡು ಆ ದಿಕ್ಕಿನಲ್ಲಿ ನಮ್ಮ ಅಧಿಕಾರಿಗಳು ಪ್ರಯತ್ನಿಸಿ ಅಲ್ಲಿಗೆ ಹೋಗಿ ಬಂದಿದ್ದಾರೆ. ಈ ಸಂದರ್ಭದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಅಲ್ಲಿ ಕಲ್ಲಿದ್ದಲು ಸಿಗುತ್ತಿರುವುದರಿಂದ ಅಲ್ಲಿನ ಸರ್ಕಾರದ 1.500 ಎಕರೆಯಷ್ಟು ಭೂಮಿಯಲ್ಲಿ 1.000 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಮಾಡುವುದಕ್ಕೆ ಬೇಕಾದಷ್ಟು ಸ್ಥಳವೂ ಸಿಗುತ್ತಿದೆ ಎಂದು ಪ್ರಯತ್ನ ಮಾಡುತ್ತಿದ್ದೇವೆ. ಈ ದಿಕ್ಕಿನಲ್ಲಿ ನಾವು ನಾಳೆ ಮಾತುಕತೆಯಾಡುವುದಕ್ಕಿಂತ ಮುಂಚೆ ಸದನದ ಗಮನಕ್ಕೆ ತರುವುದು ನಮ್ಮ ಕರ್ತವ್ಯ Ultimate ಆಗಿ final decision ತೆಗೆದುಕೊಳ್ಳುವ ಸಮಯದಲ್ಲಿ ಮಾಡೋಣ.

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) ; ಸನ್ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು 31ನೇ ಮಾರ್ಚಿ 2007ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಧನ ವಿನಿಯೋಗ ಲೆಕ್ಕ ಪತ್ರಗಳು ಮತ್ತು ಆರ್ಥಿಕ ಲೆಕ್ಕಪತ್ರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.